**<u>ದಿನಾಂಕಃ 19.12.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಪಾಟೀ ಸವಾಲು ವಾದಿ ಪರ ಶ್ರೀ.ಎಂ.ಎಂ. ವಕೀಲರಿಂದಃ</u>**

1) ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಸರ್ವೆ ನಂ.234 ರಲ್ಲಿ 444 ಎಕರೆ 31 ಗುಂಟೆ ಜಾಗ ಗೋಮಾಳದ ಜಮೀನು ಇರುವುದಾಗಿ ಬರೆಸಿರುತ್ತೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತನ್ನು ನಾನು ನೋಡಿರುತ್ತೇನೆ. ದಾವಾ ಸ್ವತ್ತು ಗೋಮಾಳದ ಜಮೀನಿನ ಒಂದು ಭಾಗ ಎಂದರೆ ಸರಿ. ದಾವಾ ಸ್ವತ್ತನ್ನು ವಾದಿಯ ತಾತ 1929-30 ರಲ್ಲಿ ಸರ್ಕಾರದಿಂದ ಖರೀದಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸರ್ಕಾರದಿಂದ ವಾದಿಯ ತಾತನಿಗೆ ದಾವಾ ಸ್ವತ್ತಿನ ಮೇಲೆ ಮಂಜೂರಾತಿ ಪತ್ರವನ್ನು ನೀಡಿದ ಕಾಲದಿಂದಲೂ ವಾದಿ ಮತ್ತು ಆತನ ಕುಟುಂಬದವರು ದಾವಾ ಸ್ವತ್ತಿನ ಸ್ವಾಧೀನದಲ್ಲಿ ಇರುತ್ತಾರೆ ಎಂದರೆ ಸರಿಯಲ್ಲ.

2) ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ದಾವಾ ಸ್ವತ್ತನ್ನು ಬೇರೆಯವರಿಗೆ ಸರ್ಕಾರದಿಂದ ಮಂಜೂರು ಆಗಿರುತ್ತದೆ ಎಂದು ಹೇಳಿರುತ್ತೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ಪೂರ್ವಕ್ಕೆ ನನ್ನ ಮಾವ ಶಂಭೂಗೌಡರಿಗೆ ಸೇರಿದ ಸ್ವತ್ತು ಇದೆ. ನಿಡಿ.17 ರ ಕ್ರಯ ಪತ್ರದಲ್ಲಿ ನಮೂದಿಸಿರುವ ಸ್ವತ್ತಿನ ಪೂರ್ವಕ್ಕೆ ಸರ್ಕಾರಿ ಬೆಟ್ಟ ಎಂದು ತೋರಿಸಲಾಗಿದೆ ಎಂದರೆ ಸರಿ. ಸದರಿ ಕ್ರಯ ಪತ್ರದಲ್ಲಿ ತೋರಿಸಿರುವ ಪೂರ್ವ ದಿಕ್ಕಿನ ಒಟ್ಟು 4 ಎಕರೆ ಸ್ವತ್ತಿಗೆ ಈ ಪ್ರಕರಣವನ್ನು ಹೂಡಲಾಗಿದೆ ಎಂದರೆ ಸರಿಯಲ್ಲ. ನನ್ನ ಮಾವ ಶಂಭೂಗೌಡರಿಗೆ ಸರ್ವೆ ನಂ.234 ರಲ್ಲಿ ಜಮೀನು ಮಂಜೂರು ಆಗಿರುವುದಿಲ್ಲ. ನಿಡಿ.3 ರಿಂದ 11 ಮತ್ತು 16 ರವರೆಗಿನ ಪಹಣಿ ಪತ್ರಿಕೆಗಳು ದಾವಾ ಸ್ವತ್ತಿಗೆ ಸಂಬಂಧಪಟ್ಟ ದಾಖಲೆಗಳು ಆಗಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ದಾಖಲೆಗಳು ಬೇರೆ ಜನರಿಗೆ ಸೇರಿದ ದಾಖಲೆಗಳು ಆಗಿದ್ದು ಅವುಗಳಿಗೂ ಮತ್ತು ಪ್ರಕರಣಕ್ಕೂ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

3) ಸರ್ಕಾರದಿಂದ ವಾದಿಯ ತಾತನಿಗೆ ಸರ್ವೆ ನಂ.234 ರಲ್ಲಿ ಒಟ್ಟು 4 ಎಕರೆ ಜಮೀನಿಗೆ ಮಂಜೂರಾತಿ ಪತ್ರವನ್ನು ನೀಡಿರುತ್ತಾರೆ ಎಂದರೆ ಸರಿಯಲ್ಲ. ಆ ರೀತಿ ಮಂಜೂರಾತಿಯಾದ ನಂತರ ಸದರಿ ದಾವಾ ಸ್ವತ್ತಿಗೆ ಸಂಬಂಧಿಸಿದಂತೆ ನಿಪಿ.3 ರಂತೆ

ನಕಾಶೆಯನ್ನೂ ಸಹ ತಯಾರಿಸಿರುತ್ತಾರೆ ಎಂದರೆ ಸರಿಯಲ್ಲ. 1975-76 ರಿಂದ 1984-85 ರವರೆಗೆ ಹೊಂಬೇಗೌಡ ಬಿನ್ ನಿಂಗೇಗೌಡ ರವರ ಹೆಸರಿಗೆ ಪಹಣಿ ದಾಖಲಾಗಿದೆ ಎಂದರೆ ಸರಿಯಲ್ಲ. ದಾವಾ ಸ್ವತ್ತನ್ನು ಅಳತೆ ಮಾಡಲು ದಿಃ 05.08.2016 ರಲ್ಲಿ ಸರ್ವೆ ಅಧಿಕಾರಿಗಳು ಬಂದಿದ್ದರು ಎಂದರೆ ಸರಿಯಲ್ಲ. ಆ ರೀತಿ ಅಧಿಕಾರಿಗಳು ಸ್ಥಳಕ್ಕೆ ಬಂದು ದಾವಾ ಸ್ವತ್ತನ್ನು ಪರಿಶೀಲನೆ ಮಾಡಿ ಮಹಜರ್ ಸಹಾ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಆ ರೀತಿ ಅಳತೆ ಮಾಡಿ ಮಹಜರ್ ಗೆ ಸ್ಥಳೀಯ ಜನರ ಸಹಿಗಳನ್ನು ಪಡೆದಿರುತ್ತಾರೆ ಎಂದರೆ ಸಾಕ್ಷಿಯು ಸದರಿ ಸಹಿಗಳನ್ನು ಪಡೆದ ಜನರಿಗೂ ಸಹ ಮಹಜರ್ ಬಗಗೆ ತಿಳಿದಿಲ್ಲ ಎಂದು ನುಡಿಯುತ್ತಾರೆ.

4) ದಾವಾ ಸ್ವತ್ತಿಗೂ ಮತ್ತು ನಮಗೂ ಯಾವುದೇ ಸಂಬಂಧ ಇರುವುದಿಲ್ಲ, ನಾನಾಗಲೀ ನನ್ನ ಮಾವ ಶಂಭೂಗೌಡ ಆಗಲೀ ಯಾವತ್ತೂ ಸಹ ದಾವಾ ಸ್ವತ್ತಿನಲ್ಲಿ ಸ್ವಾಧೀನದಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತಿಗೂ ನಮಗೂ ಸಂಬಂಧ ಇರದೇ ಇದ್ದರೂ ಸಹ ದಾವಾ ಸ್ವತ್ತಿನ ಮೇಲೆ ವಾದಿಗೆ ಇರುವ ಸ್ವಾಧೀನಕ್ಕೆ ತೊಂದರೆ ನೀಡಿ ಅವರ ಉಳುಮೆ ಕಾರ್ಯಕ್ಕೆ ಸಹಾ ಅಡ್ಡಿ ಪಡಿಸುತ್ತಿದ್ದೇವೆ ಎಂದರೆ ಸರಿಯಲ್ಲ. ವಾದಿ ತನ್ನ ದಾವಾ ಸ್ವತ್ತಿನಲ್ಲಿ ಜೆಸಿಬಿ ಮತ್ತು ಟ್ರಾಕ್ಟರ್ ಮುಖಾಂತರ ಸ್ವತ್ತನ್ನು ಮಟ್ಟ ಮಾಡಿ ಉಳುಮೆ ಮಾಡಲು ಮುಂದಾದಾಗ ನಾನು ಮತ್ತು ಇತರರು ವಾದಿಗೆ ಅಡ್ಡಿ ಪಡಿಸಿದ್ದೆವು ಎಂದರೆ ಸರಿಯಲ್ಲ.

5) ಸರ್ವೆ ನಂ.234 ರಲ್ಲಿ ಇರುವ ಒಟ್ಟು ಗೋಮಾಳದ ಪೈಕಿ ಯಾರು ಯಾರಿಗೆ ಸರ್ಕಾರದಿಂದ ಜಮೀನನ್ನು ಮಂಜೂರಾತಿ ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನಾನು ಉದ್ದೇಶಪೂರ್ವಕವಾಗಿ ವಾದಿಗೆ ಸೇರಿದ ದಾವಾ ಸ್ವತ್ತನ್ನು ಹೊಡೆದುಕೊಳ್ಳುವ ಸಲುವಾಗಿ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ- ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕೀಕರಣ ಮಾಡಲಾಯಿತು).

ಓ. ಹೆ. ಕೇ. ಸರಿ ಇದೆ.

**ಪ್ರಧಾನ ದಿವಾಣಿ ಹಾಗೂ ಪ್ರ.ದ.ನ್ಯಾ. ದಂ.ಗಳ**
**ನ್ಯಾಯಾಲಯ, ಚನ್ನಪಟ್ಟಣ.**